# ಶರಣ ಸಂಸ್ಕೃತಿ – ವಚನಕಾರರ ವೈಚಾರಿಕ ಪ್ರಜ್ಞೆ

ಡಾ.ಶುಭಾ ಮರವಂತೆ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು ಶಿವಮೊಗ್ಗ.
shubha.maravanthe@gmail.com

ಕನ್ನಡ ನಾಡಿನಲ್ಲಿ ವಚನಕಾರರು ಬದುಕಿ ಬಾಳಿದ ಕಾಲಘಟ್ಟ ಹಲವು ಸಾಂಸ್ಕೃತಿಕ ಕಾರಣಗಳಿಗಾಗಿ ನಮಗೆ ಮುಖ್ಯವೆನಿಸುತ್ತದೆ. ಹೊಸ ಜೀವನ ಸಿದ್ಧಾಂತವನ್ನು ಒಂದು ಸಮೂಹವಾಗಿ ಒಪ್ಪಿಕೊಂಡು ಅದನ್ನು ಆಚರಣೆಗೆ ತಂದವರು ಅವರು. ಈಗಾಗಲೇ ಸಮಾಜದಲ್ಲಿ ಚಾಲ್ತಿಯಲ್ಲಿದ್ದ ಧಾರ್ಮಿಕ ಮೌಢ್ಯಗಳನ್ನು ಪ್ರಶ್ನಿಸಿ ಅದರ ಪುನರ್ ವಿವೇಚನೆಗೆ ಕಾರಣವಾಗುವ ಸನ್ನಿವೇಶವನ್ನು ಮೊದಲು ಎದುರುಗೊಂಡವರು ಅಂದರೆ ವಚನಕಾರರೆ. ಬದುಕನ್ನು ಅತ್ಯಂತ ಸರಳವಾಗಿ ಸ್ವೀಕರಿಸುವ ಬದ್ಧತೆಯನ್ನು ನಡೆನುಡಿ ಸಿದ್ಧಾಂತದಲ್ಲಿ ಅಳವಡಿಸಿಕೊಂಡ ವಚನಕಾರರು ಇಂದಿನ ನಮ್ಮ ಧಾವಂತದ, ಮೌಲ್ಯ ರಹಿತ ಜೀವನಕ್ಕೊಂದು  ತಿಳಿವಿನ ದಾರಿಯಾಗಿ ಕಾಣುತ್ತಾರೆ. ಸಮೂಹ ಜೀವನಕ್ಕೊಂದು ಮಾದರಿ ಎಂಬಂತೆ ತೋರುತ್ತಾರೆ. ವಚನಕಾರರು ಈ ನೆಲದ ಸಾಂಸ್ಕೃತಿಕ ಹಿರಿಮೆಯನ್ನು ಸರಳ ಪದ ಸಂಪತ್ತುಗಳಲ್ಲಿ ತಿಳಿಸಿದರು. ಬದುಕಿನ ಅತ್ಯಂತ ಸೂಕ್ಷ್ಮ ಸತ್ಯಗಳನ್ನು ಅನುಭಾವದ ಬೆಳಕಿನಲ್ಲಿ ನಿರೂಪಿಸಿದರು. ಶರಣತ್ವ ಕೇವಲ ಒಂದು ಆಧ್ಯಾತ್ಮಿಕ ಮೌಲ್ಯವಷ್ಟೇ ಅಲ್ಲ ಸ್ವಂತ ಬದುಕಿನ ನಿಷ್ಠೆ ಎನ್ನುವುದನ್ನು ಶರಣರು ತೋರಿಸಿಕೊಟ್ಟರು.

ಅದರಲ್ಲೂ ವಚನಕಾರ್ತಿಯರು ಬದುಕಿದ ಪರಿ ನಮಗೆ ಅಚ್ಚರಿ ಮೂಡಿಸುತ್ತದೆ. ಶರಣತ್ವವೆನ್ನುವ ಲಿಂಗ ಸಂಗದಲ್ಲಿ ಸುಖಿಯಾದ ಶರಣೆಯರು ಇಹದ ಭೋಗ ಭಾಗ್ಯಗಳಿಗೆ ಸೆಡ್ಡು ಹೊಡೆದು ನಿಂತಿರುವುದನ್ನು ನೋಡಿದರೆ ವಚನಯುಗ ಮಾಡಿದ ಕ್ರಾಂತಿ ಏನೆಂಬುದು ಅರ್ಥವಾಗದೆ ಇರದು.  ಶರಣರ ಸಮ ಸಮಾಜ ಚಿಂತನೆಯಲ್ಲಿ ಸ್ತ್ರೀಗೆ ಪ್ರಥಮ ಆದ್ಯತೆಯನ್ನು ನೀಡಲಾಗಿದೆ. ಹೆಣ್ಣಿನ ವ್ಯಕ್ತಿತ್ವದ ಘನತೆಯನ್ನು ಎತ್ತಿ ಹಿಡಿಯುವ ಶರಣರ ನಿಲುವುಗಳು ಜಗತ್ತಿನ ಮೊದಲ ಸ್ತ್ರೀ ಸಂವೇದನೆಯ ಪರಿಭಾಷೆಗಳಾಗಿವೆ. ಜಗತ್ತಿನ ಎಲ್ಲ ಧಾರ್ಮಿಕ–ತತ್ವಜ್ಞಾನದ ನಿಲುವುಗಳು ಸಾಮಾನ್ಯವಾಗಿ ಸ್ತ್ರೀ ದೇಹದ ಕಾರಣಕ್ಕಾಗಿ ನಿಕೃಷ್ಟಳು ಎಂದೆ ಬಿಂಬಿಸುತ್ತವೆ. ಹುಟ್ಟು ಹುಟ್ಟಿನ ಕಾರಣಕ್ಕಾಗಿ ಅವಳು ಸಮಾನತೆಯನ್ನು ನಿರೀಕ್ಷಿಸಲು ಅನರ್ಹಳು ಎಂದೆ ಭಾವಿಸುತ್ತವೆ. ಆದರೆ ವಚನಕಾರರು ಎತ್ತುವ ಸೂತಕ, ಮುಟ್ಟು ಮೈಲಿಗೆಯ ಪ್ರಶ್ನೆ ವೈಚಾರಿಕತೆಯಿಂದ ಹುಟ್ಟಿರುವ ಪ್ರಶ್ನೆಗಳಾಗಿವೆ. ಮುಟ್ಟು ಎಂದರೆ ಹೊಲೆ. ಅಸಹ್ಯ ಮತ್ತು ಅಸ್ಪೃಶ್ಯ. ಆದರೆ ಶರಣರು ಹೆಣ್ಣನ್ನು ಪರಿಭಾವಿಸಿದ ರೀತಿ ಪ್ರಪಂಚಕ್ಕೆ ಮಾದರಿಯಾದುದು. ಹೆಣ್ಣು ಮಾಯೆ ಅಲ್ಲ, ರಾಕ್ಷಸಿಯಲ್ಲ, ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದರು ಶರಣರು. ಲಿಂಗಭೇದದ ಕಡು ವಿರೋಧಿಗಳಾದ ಶರಣರು ಸ್ತ್ರೀ ಕುಲವನ್ನು ಘನತೆ ಮತ್ತು ಗೌರವದಿಂದ ಬದುಕುವ ಸಾಮಾಜಿಕ ಸನ್ನಿವೇಶವನ್ನು ನಿರ್ಮಾಣ ಮಾಡಿದ ಮೊದಲ ಧಾರ್ಮಿಕ ವೀರರು. ಮುಟ್ಟಿನ ಕಾರಣಕ್ಕಾಗಿಯೇ ಹೆಣ್ಣನ್ನು ಧಾರ್ಮಿಕ ಅಧಿಕಾರಗಳಿಂದ ದೂರವಿಟ್ಟ ಧರ್ಮದ ಸಾಂಸ್ಕೃತಿಕ ಹುನ್ನಾರಗಳನ್ನು ಬಯಲು ಮಾಡಿದರು. ಮುಟ್ಟಿನ ಸಮಯದಲ್ಲಿ ದೇವಾಲಯ ಪ್ರವೇಶವನ್ನು ನಿರಾಕರಿಸಲಾಗುತ್ತದೆ. ಅಷ್ಟೇ ಏಕೆ ಗೃಹಲಕ್ಷ್ಮೀ ಎಂದು ಹೊಗಳಿಸಿಕೊಂಡು ಸ್ವತಃ ತನ್ನ ಮನೆಯ ಒಳಗೆ ಪ್ರವೇಶಿಸುವಂತಿಲ್ಲ. ಶರಣರು ಈ ಬಗೆಯಲ್ಲಿ ನಿರ್ಬಂಧಗಳನ್ನು ಒಡ್ಡಿದ ಸಾಮಾಜಿಕ ವಿಷಮತೆಯನ್ನು, ರೀತಿ ರಿವಾಜುಗಳನ್ನು ಪ್ರಶ್ನಿಸಿದರು. ಜೇಡರ ದಾಸಿಮಯ್ಯನ ವಚನ, " ನಿಡಿದೊಂದು ಕೋಲನು ಕಡಿದು ಎರಡು ಮಾಡಿ, ಅಡಿಯ ಹೆಣ್ಣು ಮಾಡಿ ಒಡತನದ ಗಂಡು ಮಾಡಿ ನಡುವೆ ಹೊಸೆದಡೆ ಹುಟ್ಟಿದ ಕಿಚ್ಚು ಹೆಣ್ಣೋ ಗಂಡೋ?" ಎಂಬ ತಾರ್ಕಿಕ ಪ್ರಶ್ನೆಯನ್ನೆತ್ತುತ್ತಾನೆ. ಲಿಂಗಭೇಧವನ್ನು ನಿರಾಕರಿಸುವ ಶರಣರು ಜಗತ್ತಿನ ಮೊದಲ ಪ್ರಬುದ್ಧ ಸ್ತ್ರೀವಾದಿಗಳು.

ಶರಣ ಚಳುವಳಿಯ ಚೌಕಟ್ಟಿನಿಂದ ಆಚೆನಿಂತು ಶರಣೆಯರು ಪ್ರತ್ಯೇಕ ಹೋರಾಟ ಮಾಡಲಿಲ್ಲ. ಶರಣರು ಮತ್ತು ಶರಣೆಯರ ಒಟ್ಟಾದ ಸಂಘಟನಾತ್ಮಕ ಧೋರಣೆಯೊಂದು ಶರಣರಲ್ಲಿ ಕಾಣುತ್ತೇವೆ. ಅಕ್ಕ ತೋರಿಸುವ ಅಸಾಧಾರಣ ಧೈರ್ಯ ಮತ್ತು ಪುರುಷಾಧಿಕಾರವನ್ನು ವಿರೋಧಿಸುವ ನಿಲುವುಗಳು ಅದು ಎಲ್ಲ ಶರಣರ ನಿಲುವು ಎಂದು ಹೇಳಲು ಸಾಧ್ಯವಿಲ್ಲ. 'ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯಿ' ಎಂದು ಹೇಳುವ ಅಕ್ಕನ ಹೋರಾಟ ಕೆಲವೊಮ್ಮೆ ಏಕಾಂಗಿ ನೆಲೆಯಿಂದ ಹೊರಟ ದನಿಯಾಗಿ ಕಾಣಿಸುತ್ತದೆ. ಈ ದೃಷ್ಟಿಯಿಂದ ಶರಣೆಯರು ಬದಲಾವಣೆಯ ಹೊಸ ಸಂಚಲನವನ್ನು ತಮ್ಮ ವೈಯಕ್ತಿಕ ಬದುಕಿನ ಮಿತಿಯಲ್ಲಿ ನಿರ್ವಚಿಸಿದ್ದು ವಿಶೇಷ.

ಮುಖ್ಯವಾಗಿ ಬಸವ ಧರ್ಮ ಸಾಂಸಾರಿಕರ ಧರ್ಮ. ಸಾಂಸಾರಿಕ ಬದುಕಿನಲ್ಲಿ ಹೆಣ್ಣು ಗಂಡು ಸಮಾನರು ಎಂಬುದು ಇದರ ತತ್ವ. 'ಹೆಣ್ಣು' ಇಲ್ಲಿ ಬರೀ ಜೈವಿಕ ಸತ್ಯದ ನೆಲೆಗಷ್ಟೇ ಸೀಮಿತವಾಗಿಲ್ಲ. ಅವಳ ವೈಚರಿಕತೆಗೆ, ಬೌದ್ಧಿಕತೆಗೆ ಮುಕ್ತ ಅವಕಾಶ ಸಿಕ್ಕಿರುವುದು ವಚನಯುಗದಲ್ಲಿ ಎಂಬುದು ಅಷ್ಟೇ ಮುಖ್ಯ. ಅರಿವಿನ ಸೆರಗು ಹೊದ್ದ ಬಹುತೇಕ ಶರಣೆಯರು ಹೊಸ ಜೀವನ ದೃಷ್ಟಿಗೆ ತೆರೆದುಕೊಂಡಿರುವುದು ವಿಶೇಷ. ವೈಚಾರಿಕತೆ ಮತ್ತು ಪ್ರಬುದ್ಧತೆ ಎರಡನ್ನೂ ಮೆರೆದ ವಚನಕಾರ್ತಿಯರು ತಾವು ಒಡಗೊಂಡ ಪುರುಷರ ತಪ್ಪುಗಳನ್ನು ತಿದ್ದುವ ವಿವೇಕಿಗಳು. ತಾವು ನಂಬಿಕೊಂಡ ಮೌಲ್ಯಗಳಿಗೆ ಬದ್ಧತೆಯನ್ನು ತುಂಬಿದ ಧೀಮಂತೆಯರು. 'ಹೆಣ್ಣುತನದ ಮಾತನಳಿದು' ಬದುಕುವುದನ್ನು ಜ್ಞಾನ ಮತ್ತು ಅರಿವಿನ ಕುರುಹು ಎಂದು ಭಾವಿಸುವ ಶರಣೆಯರು ಲಿಂಗಾತೀತ ಧರ್ಮದ ಪ್ರತಿಪಾದಕರು. ಸ್ತ್ರೀ–ಪುರುಷರ ಜೈವಿಕ ಭಿನ್ನತೆಯನ್ನು ಆಧರಿಸಿ  ಹೆಣ್ಣನ್ನು ಎಲ್ಲ ಅವಕಾಶಗಳಿಂದ ವಂಚಿತಳಾಗುವಂತೆ ಮಾಡುವುದರ ಮೂಲಕ ಅವಳ ಅಸ್ತಿತ್ವವನ್ನು ನಿರಾಕರಿಸುವ ನಿರಂತರ ಹುನ್ನಾರವೊಂದು ಧರ್ಮ, ಸಂಸ್ಕೃತಿಗಳ ಹೆಸರಿನಲ್ಲಿ ಸೃಷ್ಟಿಯಾಗಿರುವುದು ನಿಜಕ್ಕೂ ಆತಂಕದ ವಿಷಯ. ಈ ಸೂಕ್ಷ್ಮತೆಯನ್ನು ಅರಿತು ಅದನ್ನು ತೊಡೆದು ಹಾಕುವಲ್ಲಿ ಮೊದಲ ಹೆಜ್ಜೆ ಇಟ್ಟವರು ಶರಣರು. ಶರಣರ ನಡೆ ನುಡಿಯಿಂದ ಜಾಗೃತರಾದವರು ಶರಣೆಯರು. ನಮಗೆ ದೊರೆಯುವ

ಪ್ರತಿ ವಚನಕಾರ್ತಿಯರು ಕಾಯಕನಿಷ್ಠರು. ದುಡಿಮೆ ಅವರ ಬದುಕಿನ ವಿಶಿಷ್ಠ ತತ್ವ. ಕೈಕೂಲಿ ಕೆಲಸ ಮಾಡುವ ಆಯ್ದಕ್ಕಿ ಲಕ್ಕಮ್ಮ (ಆಯ ಎಂಬ ಪದಕ್ಕೆ ಕೂಲಿ ಎಂಬರ್ಥವೂ ಇರುವುದರಿಂದ ಕೂಲಿ ಕೆಲಸ ಮಾಡುವ ಆಯ್ದಕ್ಕಿ ಲಕ್ಕಮ್ಮ ಎನ್ನುವುದೊಳಿತು), ಕಸಗುಡಿಸುವ ಕಾಯಕ ಮಾಡುವ ಸತ್ಯಕ್ಕ, ನೂಲುವ ಕಾಯಕ ಮಾಡುವ ಕದಿರೆ ರೆಮ್ಮವ್ವ, ಕೊಟ್ಟಣ ಕುಟ್ಟುವ ಕಾಯಕ ಮಾಡುವ ಸೋಮವ್ವ, ಕುಂಬಾರಿಕೆಯ ವೃತ್ತಿ ಮಾಡುವ ಕೇತಲದೇವಿ ಇವರೆಲ್ಲರು ಆರ್ಥಿಕ ಸ್ವಾವಲಂಬನೆಯನ್ನು ಪ್ರತಿನಿಧಿಸುವವರೆ ಆಗಿದ್ದಾರೆ. ಆದರೆ ಅವರ ಸ್ವಾವಲಂಬನೆಯ ನಿಲುವುಗಳು ಇಂದಿಗೆ ನಾಳೆಗೆ ಕೂಡಿಡುವ ಧೋರಣೆಯಿಂದ ಹುಟ್ಟಿಲ್ಲ. ಬದಲಿಗೆ ಕಾಯಕ, ದಾಸೋಹದ ನೆಲೆಯಲ್ಲಿ ಹೆಣ್ಣಿನ ದುಡಿಮೆ ಸಾರ್ಥಕವಾಗಬೇಕೆಂಬ ಸಮಾಜಮುಖಿ ಆಶಯಗಳಿಗೆ ಬದ್ಧವಾಗಿದೆ

> ಅರಿವನಣಲೊಳಗಿಕ್ಕಿ ಅಗಿವುತ್ತಿದೆ ಮರ್ತ್ಯಲೋಕವೆಲ್ಲವು
>
> ಅರಿವು ಉಳಿಯಲರಿಯದೆ ಕೆಟ್ಟಿತ್ತು ಲೋಕವೆಲ್ಲವು
>
> ನಾನೆಂತು ಬದುಕುವೆನಣ್ಣಾ?
>
> ಕತ್ತಲೆ ಬೆಳಗ ಕಾಂಬ ಸಂದೇಹಿ ನಾನೊಬ್ಬಳು
>
> ಎನ್ನ ಕಣ್ಣಕಟ್ಟಿ ಕನ್ನಡಿಯ ತೋರಿತ್ತೊ ಅಜಗಣ್ಣಾ ನಿನ್ನ ಯೋಗ! (ಮುಕ್ತಾಯಕ್ಕ)

> "ಜ್ಞಾನವೆಂಬುದು ಬೀದಿಯ ಪಸರವೇ?
>
> ಬೊಕ್ಕಣಕ್ಕೆ ತುಂಬುವ ಹುರುಳಿಯೆ?
>
> ಚೀಲದೊಳಗಣ ಜೀರಿಗೆಯೆ?
>
> ಗಾಣದೊಳಗಣ ಹಿಂಡಿಯೆ?"

ಅಮುಗೆರಾಯಮ್ಮನವರ ಈ ವಚನ ಅರಿವಿನ ಹರವನ್ನು ನವಿರಾಗಿ ವಿಶ್ಲೇಷಿಸುತ್ತದೆ. ಜ್ಞಾನವು ಅಧ್ಯಾತ್ಮದ ದಾರಿಯಲ್ಲಿ ಸಾಗುವ ಶರಣರಿಗೆ ಮಾರ್ಗದರ್ಶಿ. ಅದೇನು ಬೀದಿಯಲ್ಲಿ ದೊರೆಯುವ ವಸ್ತುವೆ? ಬೊಕ್ಕಣಕ್ಕೆ ತುಂಬುವ ಹುರುಳಿಯೆ? ಚೀಲದೊಳಗಿರುವ ಜೀರಿಗೆಯೇ? ಗಾಣದೊಳಗಿರುವ ಹಿಂಡಿಯೇ? ಎಂದು ಪ್ರಶ್ನಿಸುತ್ತಾಳೆ. ಮೊತ್ತ ಮೊದಲ ಬಾರಿಗೆ ಹೆಣ್ಣಿಗೆ ಪ್ರಶ್ನಿಸುವ ಅರ್ಹತೆಯನ್ನು ಅರಿವು ಮಾಡಿಕೊಟ್ಟಿದ್ದು ವಚನ ಸಾಹಿತ್ಯ. ಅರಿವನ್ನು ಗುರುವಾಗಿಸಿಕೊಂಡ ಈ ಶರಣ ಪರಂಪರೆಯ ಸಾಹಿತ್ಯಕ್ಕೆ ವೈಚಾರಿಕತೆಯ ನೋಟಗಳಿವೆ. ಸಂಸಾರವೆಂಬುದು 'ಸತಿಪತಿಗಳೊಂದಾದ ಭಕ್ತಿ' ಯ ಪಥವಾಗಿ ಶರಣರಿಗೆ ಕಾಣಿಸುತ್ತದೆ. ವಚನ ರಚನೆಗಳು ಸಾಮೂಹಿಕ ನೆಲೆಯ ರಚನೆಯ ಮಾದರಿಗಳಾಗಿರುವುದರಿಂದ ಅದರಲ್ಲಿ ಸಾಕಷ್ಟು ವಿಚಾರ ವಿವೇಕ ತುಂಬಿದೆ. ವಚನಕಾರ್ತಿಯರಲ್ಲಿ ಅಕ್ಕ ನಾಗಮ್ಮ, ಸತ್ಯಕ್ಕ, ಮುಕ್ತಾಯಕ್ಕ, ಮಹಾದೇವಿಯಕ್ಕ, ಸೂಳೆ ಸಂಕವ್ವೆ, ನೀಲಾಂಬಿಕೆ ಮೊದಲಾದವರು ತಮ್ಮ ಮೆಚ್ಚಿನ ಶರಣರ ಸಹಾನುವರ್ತಿಗಳಾಗುವುದರ ಜೊತೆಗೆ ವಿಶಿಷ್ಟ ಚಿಂತನೆಯ ನೆಲೆಗಳನ್ನು ಶೋಧಿಸಿಕೊಂಡ ಬಗೆ ನಿಜಕ್ಕೂ ಮನನೀಯವೆನಿಸುತ್ತದೆ. ಇಡೀ ವಚನ ಸಾಹಿತ್ಯದ ಉಳಿವಿಗೆ ಕಾರಣಳಾದ ಅಕ್ಕ ನಾಗಮ್ಮ ಬದುಕು ಮತ್ತು ವಚನ ಎಂಬುದನ್ನು ಒಂದೆ ಎಂದು ಪರಿಭಾವಿಸಿದವಳು. ಅಕ್ಕ ನಮ್ಮೊಳಗಿನ ಸ್ತ್ರೀ ದನಿ. ಅಕ್ಕನನ್ನು ಹೊರತುಪಡಿಸಿ ಸ್ತ್ರೀವಾದಿ ಸಿದ್ಧಾಂತಗಳನ್ನು ನೋಡಲು ಸಾಧ್ಯವಿಲ್ಲ.

ಬದುಕು ಹೆಚ್ಚು ಸಂಕೀರ್ಣಗೊಳ್ಳುವುದು ನಮ್ಮ ಮನಸ್ಸು ಮತ್ತು ಕಾರ್ಯಗಳಿಂದ. ಎಷ್ಟೋ ಬಾರಿ ನಾವು ಯೋಚಿಸುವ, ಯೋಜಿಸುವ ಕಾರ್ಯಗಳಿಗೆ ವಿವೇಕ ಬಳಸದೆ ಇದ್ದರೆ ಅದರಿಂದ ಆಗುವ ಅನಾಹುತ ನಮ್ಮ ನಿರೀಕ್ಷೆಗೂ ಮಿರಿರುತ್ತದೆ. ನಮ್ಮ ಆಧುನಿಕ ಜೀವನ ವಿಧಾನವು ಆರಾಮದಾಯಕವಾಗಿಲ್ಲ. ಪ್ರತಿಕ್ಷಣವೂ ಧಾವಂತ, ಗಡಿಬಿಡಿ. ಬೇಗ ಮಾಡಿಬಿಡುವ ತರಾತುರಿ. ಇಂತಹ ಸಂದರ್ಭಗಳಿಂದ ಉಂಟಾಗುವ ಮಾನಸಿಕ, ಶಾರೀರಿಕ ಹಾನಿಯ ಬಗ್ಗೆ ನಾವು ಯೋಚಿಸುವುದೆ ಇಲ್ಲ. ಮನಸ್ಸು ಒತ್ತಡಕ್ಕೆ ಒಳಗಾಗುವುದು ಇಲ್ಲಿಯೆ. ಒತ್ತಡವನ್ನು ನಿಭಾಯಿಸುವ ಮನೋಸ್ಥಿತಿಯೊಂದನ್ನು ಹೇಗೆ ಸೃಷ್ಟಿಸಿಕೊಳ್ಳಬೇಕೆನ್ನುವುದಕ್ಕೆ ಶಿವ ಶರಣರ ವಚನಗಳಲ್ಲಿ ಅನೇಕ ನಿದರ್ಶನಗಳಿವೆ. ಒಂದರ್ಥದಲ್ಲಿ ಹನ್ನೆರಡನೆ ಶತಮಾನದ ವಚನಕಾರರು ವಿಶ್ವದ ಮೊದಲ ಮನೋಶಾಸ್ತ್ರಜ್ಞರು. ಕಾಯಕ ಎನ್ನುವ ಪರಿಕಲ್ಪನೆಯಲ್ಲಿ ಮನಸ್ಸು ದೇಹದ ಸಮತೋಲನ, ಶಾರೀರಿಕ, ಮಾನಸಿಕ ಆರೋಗ್ಯದ ಬಗ್ಗೆ ಚಿಂತಿಸುತ್ತಾರೆ. ದುಡಿಮೆ, ಕಾಯಕ ಎನ್ನುವುದು ಅಲ್ಲಿ ಕೇವಲ ಶ್ರಮವಲ್ಲ; ಅದೊಂದು ವಿಶ್ರಾಂತಿ. ಮನಸ್ಸು ಶರೀರವನ್ನು ಸರಿಯಾಗಿ ದುಡಿಸುವ ಒಂದು ಬಗೆ. ಅದನ್ನೆ ಅರಿವು–ಜ್ಞಾನ–ಕ್ರಿಯೆಯಾಗಿ ಪ್ರತಿಯೊಂದು ಕೆಲಸವನ್ನು ನೋಡುವ ಕ್ರಮವನ್ನು ನಮ್ಮ ಶರಣರು ನಮಗೆ ಕಲಿಸಿದರು. ಅನುಭವವನ್ನು ಅನುಭಾವವಾಗಿಸುವ ದಾರಿ. ಅನುಭಾವ ಎನ್ನುವುದು ಸಾಮಾನ್ಯ ಅರ್ಥದ ವ್ಯಾಪ್ತಿಗೆ ನಿಲುಕುವ ಪದವಲ್ಲ. ಸಾಧಕರು ಹುಡುಕುವ ಗಮ್ಯ ಮಾರ್ಗವೆಂಬ ಕಲ್ಪನೆ ನಮ್ಮ ಸನಾತನ ಸಂಸ್ಕೃತಿಯಲ್ಲಿದೆ. ಅದನ್ನು ಸಾಮಾನ್ಯರು ಅರ್ಥ ಮಾಡಿಕೊಳ್ಳುವುದು ಸಾಧ್ಯವೇ ಇರಲಿಲ್ಲ. ಅಂತಹ ಅನುಭಾವವನ್ನು ಅನುಭವದ ನೆಲೆಗೆ ತಂದು ಹೇಳುವ ಸರಳ ಮಾರ್ಗವನ್ನು ಪರಿಚಯಿಸಿದವರು ನಮ್ಮ ಶಿವ ಶರಣ–ಶರಣೆಯರು, ತತ್ವಪದಕಾರರು. ಬದುಕಿನ ಸಂದಿಗ್ಧತೆಗಳನ್ನು ನಿಭಾಯಿಸುವ ಧೀಶಕ್ತಿ ನಮ್ಮೊಳಗೆ ಇದೆ ಎನ್ನುವುದನ್ನು ತಿಳಿಸಿಕೊಟ್ಟವರು. ತಮ್ಮ ತಮ್ಮ ಕಾಯಕದ ನೆಲೆಯಲ್ಲಿ ಗಹನವಾದ ತಾತ್ವಿಕತೆಯನ್ನು ಸಂಕ್ಷಿಪ್ತಗೊಳಿಸಿ ಜನ ಸಾಮಾನ್ಯರಿಗೆ ಅರ್ಥವಾಗುವ ಹಾಗೆ ಹೇಳಿದವರು. ಅವರ ಸಹಿಷ್ಣತೆಯನ್ನು ವಚನಗಳ ಪರಿಭಾಷೆಯಿಂದ ಭಿನ್ನವಾಗಿಯೇ ನೋಡಬೇಕಾಗುತ್ತದೆ. ಅವರು ಕಷ್ಟ ಸಹಿಷ್ಣುಗಳು. ಶ್ರಮಜೀವಿಗಳು. ಪರ ಸಹಾನುಭೂತಿ ಹೊಂದಿದವರು. ಆದರೆ ಇತರ ಧರ್ಮಗಳ ಧಾರ್ಮಿಕ ಕಟ್ಟುಪಾಡುಗಳು, ಮೌಢ್ಯಗಳ ಪ್ರಶ್ನೆ ಬಂದಾಗ ಅದನ್ನು ವಿರೋಧಿಸುವಲ್ಲಿ ಸಹಿಷ್ಣುತೆಯ ಉದಾರವಾದಿ ನಿಲುವುಗಳನ್ನು ಅವರು ಪ್ರದರ್ಶಿಸುವುದಿಲ್ಲ ಎಂಬುದೂ ಅಷ್ಟೇ ಸತ್ಯ.

ಹುಟ್ಟು ಸಾವನ್ನು ಶರಣರು ನಿರ್ವಚಿಸುವ ಪರಿ ಅನನ್ಯವಾದುದು. ಬಹುರೂಪಿ ಚೌಡಯ್ಯನೆಂಬ ವಚನಕಾರ ಕತ್ತಲು ಬೆಳಕು, ಜ್ಞಾನ ಅಜ್ಞಾನವೆಂಬ ಅರಿವಿನ ದಾರಿಯನ್ನು ತನ್ನೊಂದು ವಚನದಲ್ಲಿ ಹೀಗೆ ಹೇಳುತ್ತಾನೆ:

ಅನುದಿನಗಳೆಂಬುವು ಪ್ರಣತತೆಯಾಗಿ
ವರುಷವೆಂಬವು ಬತ್ತಿಯಾಗಿ
ಜೀವಜಾತಿಯ ಬೆಳಗ ಬೆಳಗಿನಲರಿಯಬೇಕು
ಬೆಳಗುಳ್ಳಲ್ಲಿ ಆತ ನಡೆಸಿದಂತೆ ನಡೆಯಬೇಕು
ಬೆಳಗುಳ್ಳಲ್ಲಿ ಆತ ನುಡಿಸಿದಂತೆ ನಡೆಯಬೇಕು
ಎಣ್ಣೆ ಎಂಬ ಜವ್ವನ ಸವೆಯದ ಮುನ್ನ
ಬೆಳಗು ಕತ್ತಲೆಯಾಗದ ಮುನ್ನ ರೇಕಣ್ಣಪ್ರಿಯ
ನಾಗಿನಾಥ ಬೆಳಗ ಬೆಳಗಿನಲರಿಯಬೇಕು

ಬಹುಕೆಂಬುದು ಬೆಳಗು, ಸಾವೆಂಬುದು ಕತ್ತಲೆ ಎನ್ನುವ ಈ ಎಣ್ಣೆ ದೀಪ, ಹಣತೆಯ ಪರಿಕಲ್ಪನೆಯಲ್ಲಿ ದಿನ ವರುಷ, ದೇಹ ಜೀವಗಳ ಸೂಕ್ಷ್ಮ ವಿವೇಚನೆಯಿದೆ.

'ದೇಹವೇ ದೇವಾಲಯ' ಎನ್ನುವುದನ್ನು ಪ್ರತಿಪಾದಿಸಿದ ಶರಣರಿಗೆ ದೇಹದ ಹೊರಗಿನ ಆಚರಣೆಗಿಂತ ಅಂತರಂಗದ ಸಾಧನೆ ದೊಡ್ಡದಾಗಿ ಕಂಡಿದೆ. ಬಸವಣ್ಣನವರು ಮಂಡಿಸಿದ ಈ ಪರಿಕಲ್ಪನೆಯಲ್ಲಿ ಯುಗಧರ್ಮವನ್ನೇ ಮೀರುವ,. ಸನಾತನ ಪಾರಂಪರಿಕ ಜ್ಞಾನಗಳನ್ನು ಪ್ರಶ್ನಿಸುವ ವೈಚಾರಿಕತೆಯಿದೆ. ಇಲ್ಲಿಯವರೆಗೆ ದೇಹ ನಶ್ವರ, ಆತ್ಮವೊಂದೆ ಶಾಶ್ವತವೆಂಬ ದ್ವೈತ ಅದ್ವೈತದ ಪರಿಕಲ್ಪನೆಗಳಿದ್ದವು. ರಕ್ತ, ಮಾಂಸ, ಕೀವುಗಳಿಂದ ತುಂಬಿದ ಶರೀರವನ್ನು ನಿಕೃಷ್ಟವೆಂದು ಪರಿಭಾವಿಸುವ ಮನೋಧರ್ಮವು ಆಗಲೇ ಸ್ಥಾಪಿತ ಮೌಲ್ಯವಾಗಿರುವ ಸಂದರ್ಭದಲ್ಲಿ ಬಸವಣ್ಣನವರು ದೇಹವೇ ದೇವಾಲಯವೆಂದು ಘೋಷಿಸಿರುವುದು ಸಾಧಾರಣವಾದ ವಿಷಯವಾಗಿರಲಿಲ್ಲ. ಬಹಿರಂಗದ ಕ್ರಿಯೆಗಳಲ್ಲಿ ಶುಚಿತ್ವ ಅದಕ್ಕಿಂತ ಹೆಚ್ಚಾಗಿ ಅಂತರಂಗದ ಶುಚಿತ್ವವನ್ನು ವಚನ ಧರ್ಮದ ಪ್ರಣಾಳಿಕೆಯಾಗಿ ಸ್ವೀಕರಿಸಿದರು. ಮನಸ್ಸಿನ ಮೇಲೆ ಸಾಧಿಸುವ ವಿಜಯವೇ ಇಲ್ಲಿ ಶ್ರೇಷ್ಠ. ಸೂತಕವೆಂಬುದು ಇದೆಯೆ? ಎನ್ನುವುದು ವಚನಕಾರರ ಪ್ರಶ್ನೆ. ಶರೀರವು ದೇವಾಲಯವಾದ ಮೇಲೆ, ಲೀಮಗವು ದೇಹವನ್ನು ಅಲಂಕರಿಸದ ಮೇಲೆ ಹೊಲೆತನವುಂಟೆ? ಸ್ಪೃಶ್ಯ ಅಸ್ಪೃಶ್ಯವೆಂಬ ಧೋರಣೆ ಎಷ್ಟು ಸರಿ?

ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ?
ಕುಲವುಂಟೆ ಜಂಗಮವಿದ್ದೆಡೆಯಲ್ಲಿ?
ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ?
ಅಪವಿತ್ರದ ನುಡಿಯ ನುಡಿವ ಸೂತಕವೇ ಪಾತಕ

ಎಂದು ಬಸವಣ್ಣ ಹೇಳುತ್ತಾನೆ. ನಡೆ ನುಡಿಯಲ್ಲಿಯ ಕೊಳಕು ಸೂತಕ ಕಳೆಯ ಬೇಕಲ್ಲದೆ ದೇಹವನ್ನು ಅಸ್ಪೃಶ್ಯವೆಂದು ಭಾವಿಸುವುದು ಎಷ್ಟು ಸರಿ ಎಂಬುದು ಇಲ್ಲಿಯ ಪ್ರಶ್ನೆ. ಅಮುಗಿ ದೇವಯ್ಯನೆಂಬ ಶರಣ ಇಪ್ಪತ್ತ ಮೂರು ಶರಣರನ್ನು ನೆನೆದು ತನ್ನ ಕುಲ, ಛಲ,ತನು, ಮನ, ನೆನಹು, ಭಾವ ಸರ್ವಾಂಗ ಸೂತಕ ಕಳೆಯಿತೆಂದು ಶರಣರಿಗೆ ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತಾನೆ. ಹುಟ್ಟು ಮತ್ತು ಸಾವು ಜೀವಿಗಳ ಬದುಕಿನಲ್ಲಿ ಎರಡು ಮಹತ್ವದ ಘಟ್ಟ. ಅದು ಪ್ರಕೃತಿಯ ಸಹಜ ಪ್ರಕ್ರಿಯೆ. ಮುಟ್ಟು ನಿಂತು ಹುಟ್ಟುವುದು ಜೀವ ಜಗತ್ತಿನ ಸಹಜ ವಿಸ್ಮಯ. ಅದನ್ನೆ ಹೊಲೆ ಎಂದು ಭಾವಿಸುವ ಜನಗಳಿಗೆ ಅಂಬಿಗರ ಚೌಡಯ್ಯ ಕೊಡುವ ಉತ್ತರ ಹೀಗಿದೆ:

ಜನನ ಸೂತಕ ಮರಣ ಸೂತಕಂಗಳ ಕಳೆದು
ಶುದ್ಧವಾದೆನೆಂಬ ಅಜ್ಞಾನಿ ಜಡ ಜೀವಿಗಳು ನೀವು ಕೇಳಿರೋ!

ಎಂದು ಹೇಳುತ್ತಾ ಇಪ್ಪತ್ತೊಂದು ಲಕ್ಷ ಜೀವ ರಾಶಿಗಳು ಇಲ್ಲಿ ಹುಟ್ಟುತ್ತವೆ, ಬೆಳೆಯುತ್ತವೆ ಇಲ್ಲಿಯೇ ಸಾಯುತ್ತವೆ ಎಂದ ಮೇಲೆ ಈ ಭೂಮಿ, ನೀರು, ಗಾಳಿ, ಆಕಾಶ ಶುದ್ಧವೆಂದು ಹೇಗೆ ಹೇಳುವಿರಿ ಎಂದು ಪ್ರಶ್ನಿಸುತ್ತಾನೆ. ಈ ತರ್ಕವನ್ನು ಯಾರಾದರೂ ಒಪಪಿಕೊಳ್ಳಲೇ ಬೇಕು. ಕ್ಷಣ ಕ್ಷಣವೂ ಭೂಮಿಯಲ್ಲಿ ಹುಟ್ಟು ಸಾವು ನಿರಂತರವಾಗಿ ನಡೆಯುವ ಪ್ರಕ್ರಿಯೆ. ಹೀಗಿರುವಾಗ ಶುದ್ಧ, ಮಡಿ, ಮೈಲಿಗೆ ಎನ್ನುವ ಪದಗಳಿಗೆ ಅರ್ಥವಾದರೂ ಏನು? ಅಜ್ಞಾನಿಗಳಿಗೆ ಎಲ್ಲವೂ ಸೂತಕವೆ. **"ಕೊಟ್ಟುದೊಂದು ಸೂತಕ, ಮುಟ್ಟಿದುದೊಂದು ಸೂತಕ, ಕೊಟ್ಟು ಕೊಂಬುದೊಂದು ಸೂತಕ. ಲಿಂಗನಿಜಾಯತಂಗೆ ಇವೆಲ್ಲಿಯವು?"** ಎಂದು ಚೆನ್ನಬಸವಣ್ಣ ಸಿಡಿಮಿಡಿಗೊಳ್ಳುತ್ತಾನೆ. ಮುಟ್ಟಿಸಿಕೊಳ್ಳದೆ ಇರುವುದು, ಬಹಿಷ್ಕೃತರಾಗಿರುವುದು ಸೂತಕವಲ್ಲ. ಅಂಗವು ಲಿಂಗದ ಸ್ಥಾನವೆಂಬ ತಿಳುವಳಿಕೆಯೇ ಕಾಯದ ಸೂತಕ. ಪ್ರಾಣಲಿಂಗವೆಂದು ಭಾವಿಸುವುದೇ ಜನನ ಸೂತಕ, ಅದನ್ನು ಮರೆಯುವುದೆ ಮರಣ ಸೂತಕವೆಂಬ ವ್ಯಾಖ್ಯಾನ ಮಾದಾರ ಧೂಳಯ್ಯನದ್ದು. **"ಅಂಗಲಿಂಗವೆಂಬನ್ನಕ್ಕರ ಕಾಯದ ಸೂತಕ, ಪ್ರಾಣಲಿಂಗವೆಂಬನ್ನಕ್ಕರ ಅರಸುವುದೆ ಜನನ ಸೂತಕ ಮರೆವುದೆ ಮರಣ ಸೂತಕ. ಸೂತಕವ ಹಿಂಗಿ ಅಜಾತನಾಗಬಲ್ಲಡೆ ಆತಂಗೆ ಏತರ ಬಂಧವೂ ಇಲ್ಲ, ಕಾಮಧೂಮ ಧೂಳೇಶ್ವರ"**

ತಾಯಿ ಲಿಂಗವನ್ನು ಧರಿಸಿದ್ದರೆ ಗರ್ಭದಲ್ಲಿರುವ ಮಗುವೂ ಧರಿಸಿದ ಹಾಗೆ. ಹುಟ್ಟಿನ ಜೊತೆಯಲ್ಲೆ ಲಿಂಗಾಂಗ ಸಂಗಿಯಾದ ಶಿಶುವಿಗೆ ಮೈಲಿಗೆಯಾಗುವುದಾದರೂ ಹೇಗೆ? ಆ ಕಾರಣ 'ಜನನ ಸೂತಕ'ವೆಂಬುದು ಶರಣರಲ್ಲಿ ಇಲ್ಲ. ಮರಣ ಸೂತಕವೂ ಇಲ್ಲ. ಲಿಂಗ ಧರಿಸಿದ ಶರೀರ ಶವವಾದರೂ ಶಿವ ಸಾನಿಧ್ಯವನ್ನು ಸೇರುವ ಕಾರಣ ಪ್ರೇತ ಸೂತಕವೆಂಬುದು ಇರಲು ಹೇಗೆ ಸಾಧ್ಯವೆನ್ನುವುದು ವಚನಕಾರರ ತರ್ಕ. ಸೂತಕವನ್ನು

ಸಂಕಲ್ಪಿಸಿಕೊಂಡು ಹೊಲೆತನವನ್ನು ಒಪ್ಪಿಕೊಂಡರೆ ನಿನ್ನ ಮನೆಯಲ್ಲಿರುವ ಗುರು ಲಿಂಗ ಜಂಗಮ ಪಾದೋದಕ ಪ್ರಸಾದ ವಿಭೂತಿ ರುದ್ರಾಕ್ಷಿ ಶಿವಮಂತ್ರ ಎಲ್ಲವೂ ಹೊಲೆಯೇ ಆಗುತ್ತದೆ. ಸೂತಕ ನೀಗಿಸಲು ಸೀರೆ ಕೌದಿ ತೊಳೆದು ಹಾಕಿ ಗೋಡೆ ತೊಳೆದು ಹೊಲೆ ಹೋಯಿತೆಂದು ಭಾವಿಸುವ ಅಲ್ಪ ಮಾನವನೇ ನೀ ಕೇಳು, **' ಇಂತಪ್ಪ ಸೂತಕ ಪಾತಕದಲ್ಲಿ ಹೊರಳಾಡುವ ಪಾತಕದ ವಿಪ್ರರ ಮಾತು ಕೇಳಿ ಮಾಡುವ ಶಿವಭಕ್ತರಿಗೆ ಅಘೋರ ನರಕ ತಪ್ಪದು'** ಎಂದು ನಿರಾಲಂಬ ಪ್ರಭುದೇವನೆಂಬ ವಚನಕಾರ ಹೇಳುತ್ತಾನೆ. ವೈದಿಕ ಆಚರಣೆಯ ಭಾಗವಾದ ಸೂತಕ ಪಾತಕವನ್ನು ಕಟುವಾಗಿ ವಿರೋಧಿಸುತ್ತಾನೆ. ಲಿಂಗವೇ ಹಸಾದ ಶುಚಿಯೆಂದ ಬಳಿಕ ಅಶೌಚದ ಪ್ರಶ್ನೆ ಏಕೆ? ಎಂದು ಪ್ರಶ್ನಿಸುತ್ತಾನೆ. **"ಸೂತಕ ಪಾತಕ ವಿರಹಿತನಾದಡೆ ಅವನ ತನು ಸಾಕ್ಷಾತ್ ಶಿವನ ತನು'** ಎನ್ನುತ್ತಾನೆ ಸಿದ್ಧರಾಮೇಶ್ವರ. ಡೋಹರ ಕಕ್ಕಯ್ಯ, **'ಎನ್ನ ಕಷ್ಟಕುಲದ ಸೂತಕ ನಿಮ್ಮ ಹಸ್ತ ಮುಟ್ಟಿದಲ್ಲಿ ಹೋಯಿತು! ಶುಕ್ಲಶೋಣಿತದಿಂದಲಾದ ಸೂತಕ ನಿಮ್ಮ ಮುಟ್ಟಲೊಡನೆ ಬಯಲಾಯಿತು!'** ಎನ್ನುತ್ತಾನೆ. **"ಹೊಕ್ಕಲ್ಲಿ ಹೊಕ್ಕು ಮಿಕ್ಕುದನುಂಡು ಸುಖಿಯಾಗಿ ಸುಳಿವ ಜಂಗಮಕ್ಕೆ ಕುಲವೆಲ್ಲಿಯದೊ ಛಲವೆಲ್ಲಿಯದೊ? ಶೀಲ ವ್ರತ ನೇಮಂಗಳಿಲ್ಲ, ಜಾತ್ಯಾದಿ ಸೂತಕ ಮುನ್ನಿಲ್ಲ"** ಎಂಬ ನಿಲುವು ನುಲಿಯ ಚಂದಯ್ಯನದ್ದು. **'ಲಿಂಗವಿಲ್ಲದವನ ಅಂಗವೇ ಸೂತಕ'** ಎನ್ನುತ್ತಾನೆ ಚೆನ್ನಬಸವಣ್ಣ.

ವೈದಿಕ ಪರಂಪರೆ ಹೇಳುವ ಪಂಚಾಂಗವನ್ನು ನಿರಾಲಂಬ ಪ್ರಭುದೇವ ಅರ್ಥೈಸುವ ರೀತಿಯೇ ಭಿನ್ನವಾದುದು. ಮನುಷ್ಯ ಬದುಕನ್ನು ಈ ಪಂಚಾಂಗ, ಜೋತಿಷ್ಯಗಳು ನಿರ್ಧರಿಸುತ್ತಿವೆ. ವಚನಕಾರರರು ಅಂದೇ ಈ ಪಂಚಾಂಗ ಪದ್ಧತಿಯನ್ನು ನಿರಾಕರಿಸಿದರು. ಪಂಚಾಂಗ ಪಂಚಾಂಗವೆಂದು ಜೋಯಿಸರ ಕರೆಯಿಸಿ ಕೈಮುಗಿದು ಕಾಣಿಕೆಯನಿಕ್ಕಿ, ಎಲೆ ಅಡಿಕೆ ಕೊಟ್ಟು ಜೋಯಿಸನ ವಾಕ್ಯ ಸಕಲ ಕಾರ್ಯಕ್ಕೆ ಸಿದ್ಧಿಯೆಂದು ಅವನ ಎಂಜಲು(ಮಾತು) ತನ್ನುವವರನ್ನು ಹಂದಿಗಳೆಂದು ಕರೆಯುತ್ತಾನೆ. ಪಂಚಾಂಗವೆಂದರೆ ಬಾಯ ಎಂಜಲಲ್ಲ. ಪಂಚಭೂತಗಳಿಂದಾದ ಈ ಶರೀರದ ಕಾಮ ಕ್ರೋದಾಧಿಗಳನ್ನು ಮುರಿಯುವುದೆ ಪಂಚಾಂಗ. ಸತ್ವ ರಜ ತಮವೆಂಬ ಅಹಂಕಾರವ ತುಳಿವುದೆ ಪಂಚಾಂಗ. ತನ್ನ ಸತಿಯಲ್ಲದೆ ಪರಸತಿಯನ್ನು ಮುಟ್ಟದಿರುವುದೆ ಪಂಚಾಂಗ. **'ಸೂತಕ ನಾಸ್ತಿಯಾದುದೇ ಪಂಚಾಂಗ. ಜಾತಿ ಸೂತಕ, ಜನನ ಸೂತಕ, ಉಚ್ಛಿಷ್ಟ ಸೂತಕ, ಮೃತ್ಯು ಸೂತಕ, ರಜ ಸೂತಕ–ಈ ಪಂಚ ಸೂತಕವ ಶರಣರು ಕಳೆವರಾಗಿ ನಮ್ಮ ಶಿವ ಭಕ್ತರಿಗೆ ಸಲ್ಲದೆಂಬುದೆ ಪಂಚಾಂಗ'** ಹೀಗೆ ಪಂಚಾಂಗವೆಂದರೆನೆಂದು ಈ ವಚನಕಾರ ವಿವರಿಸುತ್ತಾನೆ. ಜನನ ಮರಣ ಕುಲವನ್ನು ಸುತ್ತುವರಿದ ಸೂತಕ ಪಾತಕವನ್ನು ನಿರಾಕರಿಸುವಲ್ಲಿ ಸುಳ್ಳಾಗಿಸುವಲ್ಲಿ ಶರಣರಿಗೆ ಅರಿವು ಒಂದು ಅಸ್ತ್ರವಾಯಿತು. ಅರಿವಿನಿಂದ ಅರಳಿದ ವೈಚಾರಿಕತೆ ಶರಣ ಸಾಹಿತ್ಯದ ಜೀವಾಳ. ಇಂತಹ ಅರಿವು, ಅಧ್ಯಾತ್ಮ, ವೈಚಾರಿಕತೆಯನ್ನು ಮೆರೆದ ಏಕೈಕ ಸಾಹಿತ್ಯವಿದ್ದರೆ ಅದು ವಚನ ಸಾಹಿತ್ಯ.

ಆತ್ಮ ವಿಮರ್ಶೆ ವಚನಗಳ ಇನ್ನೊಂದು ತಾತ್ವಿಕತೆ. ನನ್ನೊಳಗನ್ನು ತಾನೇ ಅರಿಯಬೇಕು ಅರ್ಥೈಸಿಕೊಳ್ಳಬೇಕೆಂಬ ಆತ್ಮಶೋಧನ ಪ್ರಜ್ಞೆ ಶರಣರ ವೈಚಾರಿಕತೆಯ ಇನ್ನೊಂದು ಭಾಗ. ಅಮುಗೆ ರಾಯಮ್ಮನವರು ಹೇಳುವ ಹಾಗೆ **"ಎನ್ನ ಕಣ್ಣೊಳಗಿನ ಕಟ್ಟಿಗೆಯ ನಾನೇ ಮುರಿಯಬೇಕು, ಎನ್ನ ಕಾಲೊಳಗಣ ಮುಳ್ಳ ನಾನೇ ತೆಗೆಯಬೇಕು, ಎನ್ನ ಅಂಗದಲ್ಲಿಪ್ಪ ಅಹಂಕಾರವ ನಾನೇ ಸುಡಬೇಕು, ಎನ್ನ ಮನದಲ್ಲಿಪ್ಪ ಮಾಯಾ ಪ್ರಪಂಚವ ನಾನೇ ಕಳೆಯಬೇಕು"** ಇಲ್ಲಿ ಸ್ವಂತಿಕೆಯ ಆತ್ಮದರ್ಶನವೇ ಮುಖ್ಯ. ನನ್ನಿಂದಲೇ ನಾನು ಮಾಡುವ ಪ್ರಯತ್ನದಿಂದಲೇ ಎಲ್ಲವೂ ಸಾಧ್ಯವೆಂಬ ತಿಳುವಳಿಕೆ ವ್ಯಕ್ತಿ ಬದುಕಿನ ಮಹತ್ತರ ಸಾಧನೆ. ಬಸವಣ್ಣನವರು,

ಎನಗೆ ನಾನೇ ಹಗೆ ನೋಡಯ್ಯಾ  
ಎನಗೆ ನಾನೇ ಕೆಳೆ ನೋಡಯ್ಯಾ  
ನಿಮ್ಮ ಸದ್ಭಕ್ತರೊಡನೆ ವಿರೋಧ ಮಾಡಿದಡೆ ಎನ್ನ ಕೊಲುವುದಾಗಿ  
ನಿಮ್ಮ ಪುರಾತನರಿಗಂಜಿ ಬೆಸಗೊಂಡೊಡೆ ಎನ್ನ ಕಾಯ್ವುದಾಗಿ,  
ಅನ್ನಯ ಹಗೆಯೆಲ್ಲಿ? ಕೆಳೆಯೆಲ್ಲಿ?  
ಬಾಗಿದ ತಲೆಯ ಮುಗಿದ ಕೈಯಾಗಿರಿಸು,  
ಕೂಡಲಸಂಗಮದೇವಾ

ಎಂದು ಪ್ರಾರ್ಥಿಸುತ್ತಾರೆ. ನನಗೆ ನಾನೆ ವೈರಿ, ನನಗೆ ನಾನೆ ಗೆಳೆಯ. ಹಗೆತನ, ವೈರತ್ವವನ್ನೇ ಸಾಧಿಸಿದರೆ ಉಳಿಗಾಲವಿಲ್ಲ. ಎಲ್ಲರೊಂದಿಗೆ ಪ್ರೀತಿಯಿಂದ ನಡೆದುಕೊಳ್ಳುವುದೆ ಜೀವನ. ಅಂತಹ ಪ್ರೀತಿಯೇ ನಮ್ಮನ್ನು ಕಾಪಾಡುತ್ತದೆ. ಹಾಗಾಗಿ ಸದಾ ಬಾಗಿದ ತಲೆ, ಮುಗಿದ ಕೈ ನನ್ನದಾಗಿರಲಿ ಎಂಬ ಭಾವದಲ್ಲಿ ಬಸವಣ್ಣನವರು ತಾನು ವಿಶ್ವ ಕುಟುಂಬಿ ಎಂಬ ಭಾವವನ್ನು ಪ್ರಕಟಪಡಿಸುತ್ತಾರೆ. ಮನುಷ್ಯ ಬದುಕಿನ ಸಾರ್ಥಕತೆ ಎನ್ನುವುದು ನಮ್ಮ ವಿಚಾರವು ಆಚರಣೆಯಾಗುವುದರಲ್ಲಿದೆ. " ಜಡೆ ಮುಡಿ ಬೋಳು ಹೇಗಿದ್ದರೇನೊ ನಡೆ ನುಡಿ ಸಿದ್ಧಾಂತವಾದರೆ ಸಾಕು" ಎಂಬ ಪಾಕದ ಭೀಮಣ್ಣನ ಮಾತಿನಂತೆ ನುಡಿದಂತೆ ನಡೆಯುವ ನಡೆದಂತೆ ನುಡಿಯುವ ಈ ಆತ್ಮ ಶೋಧನೆ ಶರಣ ಸಂಸ್ಕೃತಿಯ ಜೀವಾಳ.

ಗ್ರಂಥಋಣ:


೧. ಧರ್ಮ– ಮಹಿಳೆ ಮತ್ತು ಸಮಾಜ : ಡಾ. ಶಾಂತಾ ಇಮ್ರಾಪೂರ, ಚೇತನ ಪ್ರಕಾಶನ, ಧಾರವಾಡ (೨೦೦೧)

೨. ಅರಿವಿನೊಡನೆ ಅನುಸಂಧಾನ: ಡಾ.ನಾ.ಮೊಗಸಾಲೆ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು (೨೦೧೫)

೩. ಕಾಯಕ ಜೀವಿಗಳ ಪರ್ಯಾಯ ಸಂಸ್ಕೃತಿ: ಡಾ. ಸಿ. ವೀರಣ್ಣ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು (೨೦೧೪)

೪. ಬಸವಣ್ಣನವರ ಷಟ್‌ಸ್ಥಲ ವಚನಗಳು: ಬಸವ ಅಧ್ಯಯನ ಕೇಂದ್ರ, ಬೆಳಗಾವಿ (೨೦೧೫)